Reg No B G 155 20-1-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

❁❁ ಅಮೇರಿಕಾದ ಹೊಸ ಅಧ್ಯಕ್ಷರು ❁❁

ಸ್ವಂತ ಮನೆಯ ಕನಸು

ಈ ಕನಸು ನೆನಸಾಗಲು ಎಲ್.ಐ.ಸಿ.ಯು ಈಗ ಸಹಾಯಮಾಡುತ್ತದೆ... ವಾಸಿಸಲು ಮನೆ ಕಟ್ಟುವುದಕ್ಕಾಗಿ ಅಥವಾ ಹೊಸ ಮನೆಯನ್ನು ಖರೀದಿಮಾಡಲು ನಿಮಗೆ ನ್ಯಾಯವಾದ ಬಡ್ಡಿಯ ದರದಲ್ಲಿ ದೊಡ್ಡ ಸಾಲವನ್ನು ಕೊಡುತ್ತದೆ.

ಸಾಲದ ಸಂದಾಯಕ್ಕಾಗಿ ನಿರ್ಧರಿಸಿದ ಪೂರ್ತಿ ಕಾಲಾವಧಿಯಲ್ಲಿ ಒಂದು ವೇಳೆ ನೀವು ಇರದಿದ್ದರೂ ನಿಮ್ಮ ಮುಡದಿ ಮಕ್ಕಳಿಗೆ ಅವರದ್ದೇ ಆದ ಮನೆಯಲ್ಲಿ ಸುಖವಾಗಿ, ನೆಮ್ಮದಿಯಿಂದ ವಾಸಿಸುವಂತಾಗುವುದು. ಇದೊಂದು ನಿಜವಾಗಿಯೂ ಮನಸ್ಸಿಗೆ ಸಂತೃಪ್ತಿಯನ್ನುಂಟುಮಾಡುವ ವಿಷಯವಲ್ಲವೇ?

ಈ ಯೋಜನೆಯು ಕೆಲವು ಆರಿಸಿರುವ ಪಟ್ಟಣ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ. ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ಎಲ್.ಐ.ಸಿ. ಡಿವಿಜನಲ್ ಆಫೀಸಿನಲ್ಲಿ ವಿಚಾರಿಸಿರಿ.

ಹೆರತ್ತುಗಳು ಬಹಳ ಸುಲಭ. ಮುಖ್ಯವಾಗಿ, ಮನೆ ಕಟ್ಟಲು ನಿಮ್ಮದೇ ಆದ ಜಾಗ ವಿರಬೇಕು. ಅಲ್ಲದೆ, ಮನೆ ಕಟ್ಟುವಬಗ್ಗೆ ಮತ್ತು ಮೊದಲ ವೆಚ್ಚಕ್ಕಾಗಿ ನಿಮ್ಮ ಹತ್ತಿರ ಸ್ವಲ್ಪ ಮೂಲಧನವೂ ಇರಬೇಕು. ಆಮೇಲೆ, ಸ್ವೀಕೃತ ಯೋಜನೆಯ ಅಂತರ್ಗತವಾಗಿ ಸಾಕಷ್ಟು ಹಣವನ್ನು ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಒದಗಿಸುತ್ತದೆ.

ಜೀವ ವಿಮೆಗಿಂತ
ಶ್ರೇಷ್ಠ ಭದ್ರತೆ ಬೇರೊಂದಿಲ್ಲ

ಪರಿಹಾರ ಕಾರ್ಯಕ್ಕೆ— ಬೆಂಗಳೂರು— ರಾಜ್ಯದ ಅನಾವೃಷ್ಟಿ ಪ್ರದೇಶಗಳಿಗಾಗಿ ಪ್ರಧಾನಿಗಳ ಪರಿಹಾರನಿಧಿಯಿಂದ ರೂ. 1 ಲಕ್ಷ ಬಿಡುಗಡೆಯಾಗಿದೆ.

ಮಾತಾಡುವ ಬೆಕ್ಕು

ಟರ್ಕಿಯಲ್ಲಿನ ಕೊನ್ಯಾದ ಆಶ್ಚರ್ಯಕರ ವಾರ್ತೆ ಇದು. ಪ್ರಾಣಿ ವೈದ್ಯರು ಇಲ್ಲಿನ ಪಾಲಾ ಎಂಬ ಬೆಕ್ಕು ಮಾನವನಂತೆ ಮಾತಾಡಬಲ್ಲದೆಂದು ಹೇಳಿದ್ದಾರೆ. ಅದು ಒಂದು ರೀತಿಯ ಮಾರ್ಜಾರೀಯ ಉಚ್ಚಾರಣೆ ಹೊಂದಿರುವುದೆಂದಿದ್ದಾರೆ. ಅದು, ಓಂ, ಡಾಡ್, ಅಕ್ಕ, ಹೋಗು, ಬಾ, ಎಂಬ ಮಾತುಗಳನ್ನು ಆಡುವುದೆಂದಿದ್ದಾರೆ.

ಪಾಲಾ ಇಯೂಪ್ ಮುಟ್ಲೂ ಟರ್ಕನ ಸಾಕು ಬೆಕ್ಕು. ಅದು ಒಂದು ದಿನ ಮಾತನಾಡಿದ್ದು ಅವನಿಗೆ ಆಶ್ಚರ್ಯವಾಗಿ ಪ್ರಾಣಿವೈದ್ಯಶಲ್ಲಿಗೆ ಕರೆದುಕೊಂಡು ಹೋದನು. ಅದು, ಮಾರ್ಜಾರೀಯ ಉಚ್ಚಾರಣೆಯಿಂದ, ತಾನು ಹೊರಗೆ ಹೋಗಬೇಕಾದಾಗ, ಒಳಕ್ಕೆ ಬರಬೇಕಾದಾಗ, ಹಸಿವಾದಾಗ, ಗೊತ್ತಾಗುವಂತೆ ಹೇಳುವುದು. ಪ್ರಖ್ಯಾತಿಯಾಗಿದೆ.

ರೈಲು ಸುಟ್ಟರು

ಹೈದರಾಬಾದು— ತೆಲಂಗಾಣಾ ಪ್ರದರ್ಶನಕಾರರು ಖಮ್ಮಾಂ ಮತ್ತು ವೆಂಕಟಗಿರಿ ಮಧ್ಯೆ ಪೂರಿ-ಹೈದರಾಬಾದು ಪ್ರಯಾಣೀಕರ ರೈಲಿನ ಒಂದನೇ ತರಗತಿ ಗಾಡಿಯನ್ನು ಸುಟ್ಟುಹಾಕಿದರು.

ಮನೆ ಖರೀದಿಗೆ ಇದೆ

ಮೈಸೂರು ಇಟ್ಟಿಗೆಗೂಡು ಅರುಣಾಚಲಂ ರಸ್ತೆಯ 1 ನೇ ಕ್ರಾಸ್‌ನಲ್ಲಿ ಮನೆ ಖರೀದಿಗಿದೆ. ತಕ್ಷಣ ಸುಪರ್ದಿಗೆ ಕೊಡಲಾಗುವುದು.

— ವಿವರಗಳಿಗೆ ಇಲ್ಲಿ ವಿಚಾರಿಸಿ —
ಎಂ. ಕೆ. ಸುಕುಂದರಾವ್, ಬಿ.ಎ, ಬಿ.ಎಲ್
1067 ಚಾಮರಾಜಪುರಂ,
ಸತ್ಯವಾದಿ ಆಫೀಸ್, ಮೈಸೂರು - 4.

ಅಮೇರಿಕಾದ ಹೊಸ ಅಧ್ಯಕ್ಷರು

ನ್ಯೂಯಾರ್ಕ್— ಹೊಸ ಅಧ್ಯಕ್ಷರಾದ ಮಿ || ರಿಚರ್ಡ್ ನಿಕ್ಸನ್ನರು ಅಧಿಕಾರ ವಹಿಸಿಕೊಂಡರು.

○

ಗಾಂಧಿ ನುಡಿ ಅಂಚೆ ಮುದ್ರೆ

ನವದೆಹಲಿ— ಗಾಂಧಿ ಜನ್ಮ ಶತಾಬ್ದಿ ಸಂವತ್ಸರದ ಆಚರಣೆಯ ಸಂದರ್ಭದ ಅಂಗವಾಗಿ ದೇಶಾದ್ಯಂತ ಹಬ್ಬಿರುವ ಕೇಂದ್ರ ಅಂಚೆ ಕಚೇರಿಗಳಲ್ಲಿ ಕಾಗದ ಪತ್ರಗಳ ಮೇಲೆ "ಸತ್ಯವೇ ದೇವರು" 'ಸೇವೆಯೇ ಪೂಜೆ" ಎಂಬ ಇಂಗ್ಲೀಷ್, ಹಿಂದಿ ನುಡಿಗಳನ್ನು ತಾ || 30 ರಿಂದ 15 ದಿನಗಳ ಕಾಲ ಛಾಪಿಸಲಾಗುವುದು

★

ಡಾಕ್ಟರುಗಳಲ್ಲಿ ವಿನಂತಿ

ಬೆಳಗಾಂ— ರೂ. 62 ಲಕ್ಷದ ಜವಹರ ನೆಹ್ರೂ ಮೆಡಿಕಲ್ ಕಾಲೇಜು ಕಟ್ಟಡವನ್ನು ಉದ್ಘಾಟಿಸುತ್ತಾ, ಮುಖ್ಯ ಮಂತಿಗಳಾದ ಶ್ರೀ ವೀರೇಂದ್ರ ಪಾಟೀಲರವರು, ಡಾಕ್ಟರುಗಳು ಗ್ರಾಮಾಂತರಗಳಿಗೆ ಹೋಗಿ ಗ್ರಾಮಸ್ಥರಿಗೆ ಸೇವೆ ಸಲ್ಲಿಸಬೇಕೆಂದು ವಿನಂತಿಸಿದರು.

●

ಭಿಕ್ಷುಕರ ಚಾಲೋಕು

ಕೋಲಾರ— ಒಂದು ಭಿಕ್ಷುಕ ತಂಡವು ಸತ್ತ ಭಿಕ್ಷುಕನೊಬ್ಬನ ಶವವನ್ನು ಟೌನ್ ಹಾಲ್ ಹತ್ತಿರ ಎತ್ತರದಲ್ಲಿಟ್ಟು ಹಣ ಶೇಖರಿಸಿದರು. ಶವ ಕೆಟ್ಟು ದುರ್ವಾಸನೆ ಹೊಡೆಯುವವರೆಗೆ ಹೀಗೆ ಮಾಡಿ, ನಂತರ ಹೂತರು.

★

ಸೃಷ್ಟಿ ವೈಚಿತ್ರ್ಯ

ಷಿಲಾಂಗು— ಪುರುಷ ಮತ್ತು ಸ್ತ್ರೀಯ ಅಂಗವನ್ನು ಹೊಂದಿರುವ ಮಗುವು ಹುಟ್ಟಿದ್ದು, ಡಾಕ್ಟರುಗಳಿಗೆ ಕ್ಲಿಷ್ಟ ಸಮಸ್ಯೆಯಾಗಿದೆ.

ಸಾಹಸಿಗಳು

ಆರ್ಡರ್— 220 ಅಡಿ ಆಳದಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಇಬ್ಬರು ಫ್ರೆಂಚ್‌ರವರು ಭೂಮಿಯೊಳಗೆ 5 ತಿಂಗಳಿದ್ದು ನಂತರ ಬುಧವಾರ ಮೇಲಕ್ಕೆ ಬಂದರು: ಒಳ್ಳೇ ಆರೋಗ್ಯದಿಂದಿರುವದು ಕಂಡು ಬಂಏತು.

●

ಪ್ರೋಪ್‌ರ ಉಂಗುರದ ಕಳುವು

ಮಿಲಾ— ಮಿಲಾ ಮೇಣದಬತ್ತಿ ಆಕೃತಿಗಳ ಮ್ಯೂಜಿಯಂನಲ್ಲಿರುವ ಪೋಪ್‌ರವರ ಆಕೃತಿಯ ಬಲಗೈನ ಬೆರಳಿಗೆ ಹಾಕಿದ್ದ ಉಂಗುರವು ಕಳುವಾಗಿದೆ — ಪೋಪರು ಧರಿಸುವ ಅತ್ಯುತ್ಕೃಷ್ಟ ಕೆಂಪಿನ ಉಂಗುರದಂತಿದ್ದು ಸಾಧಾರಣ ಹರಳನ್ನು ಹೊಂದಿದೆ.

ಖೈದಿ ವಿದ್ವಾಂಸರು

ತಿರುಚಿ ಕೇಂದ್ರ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ನಾಲ್ಕು ಮಂದಿ ತಮಿಳರು ಹಿಂದಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ಪುಳವರ್ ಮತ್ತು ವಿದ್ವಾನ್ ಆಗುವ ಅರ್ಹತೆ ಪಡೆಯಲು ಪ್ರಯತ್ನಿಸುತ್ತಿರುವರು.

●

ಎಲೆಕ್ಟ್ರಿಕ್ ದೀಪವಿಲ್ಲ

ವೆಲ್ಲೂರು ವಿಮಾನ್ನ ನಿಲ್ದಾಣಕ್ಕೆ ಎಲೆಕ್ಟ್ರಿಕ್ ದೀಪಹಾಕುವ ಯೋಜನೆಯನ್ನು ವಿಮಾನ ಇಲಾಖೆ ತ್ಯಜಿಸಿದೆ — 25 ವರ್ಷಗಳಿಂದಲೂ ವಿದ್ಯುಚ್ಛಕ್ತಿಯಿಲ್ಲದಿರುವ ಈ ವಿಮಾನ ನಿಲ್ದಾವು ಎಣ್ಣೆ ಮತ್ತು ಮೇಣದ ಬತ್ತಿ ದೀಪದಿಂದಲೇ ಮುಂದುವರಿಯುತ್ತೆ.

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು
ಈಗ ಹೊಸ ರೂಪದಲ್ಲಿ ಬಂದಿದೆ.
ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕ್ಯುಮ್ ಸೋಪ್ ಪ್ಲಾಂಟ್
ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು
ಚೌಕಾಕಾರದ ರೂಪವನ್ನು ನೀಡಿದೆ.
ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ
ಮತ್ತು ಸುವಾಸನೆ ಬದಲಾಗಿಲ್ಲ.
ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ,
ಬೆಂಗಳೂರು

SHAKTI
SUDHA
A Superb Tonic

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯಿರಿ

Quality Printing — Neat Binding
Lakshminarasimha Press
Sivarampet, Mysore

ವುಡ್‌ಲಾಂಡ್ಸ್ 17-1-69 ರಿಂದ
.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....
ಆಮ್ನಾ ಸಾಮ್ನಾ
ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ
[ದಿನ 3 ಪ್ರದರ್ಶನಗಳು]

ಅಪೆರಾ— 10-1-69 ರಿಂದ
— ಅತ್ಯಮೋಘ ತಮಿಳು ಚಿತ್ರ —
ಕಾದಲ್ ವಾಹನಂ
ನಟವರ್ಗ— ಎಂ ಜಿ ರಾಮಚಂದ್ರ್, ತಾಯ್ ನಾಗೇಶ್, ಅಶೋಕ್
ಸ್ಯಾಂಡೋ ಚಿನ್ನಪ್ಪ ದೇವರ್, ಸುಂದರರಾಜ್, ಜಯಲಲಿತ, ಮನೋರಮ
.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4